

# ಭರವಸೆಯ ಪಥದಲ್ಲಿ ಸುಲಕ್ಷಾ



■ **ಶಶಿಕಾಂತ ಎಸ್. ಶೆಂಬೆಳ್ಳಿ**

ಬೀದರ್ ಜಿಲ್ಲೆಯವರೇ ಆದ ನಟಿ ಸುಲಕ್ಷಾ ಕೈರಾ ಅವರು ಈಚೆಗೆ ಬಿಡುಗಡೆಯಾದ 'ಜಗನ್ಮಾತೆ ಅಕ್ಕಮಹಾದೇವಿ' ಸಿನಿಮಾದಲ್ಲಿ ತಮ್ಮ ಮನೋಜ್ಞ ಅಭಿನಯದ ಮೂಲಕ 'ಅಕ್ಕಮಹಾದೇವಿ'ಯ ಪಾತ್ರಕ್ಕೆ ಜೀವ ತುಂಬಿದವರು. ವಿಷ್ಣುಕಾಂತ್ ಬಿ.ಜೆ. ನಿರ್ದೇಶನದ ಈ ಚಿತ್ರ 50 ದಿನಗಳ ಯಶಸ್ವಿ ಪ್ರದರ್ಶನ ಕಂಡು, ಮುನ್ನಡೆಯುತ್ತಿದೆ.

ಈ ಸಿನಿಮಾದೊಂದಿಗೆ, ಸ್ಯಾಂಡಲ್‌ವುಡ್‌ನಲ್ಲಿ ಭರವಸೆಯ ನಟಿಯಾಗಿ ಹೊರಹೊಮ್ಮುವ ಆಶಾಭಾವ ಮೂಡಿಸಿರುವ ಸುಲಕ್ಷಾ, 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

◆ **'ಜಗನ್ಮಾತೆ ಅಕ್ಕಮಹಾದೇವಿ' ಚಲನಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದಕ್ಕೆ ಹೇಗೆನಿಸುತ್ತಿದೆ?**

ನಿಜಕ್ಕೂ ಬಹಳ ಖುಷಿಯಾಗುತ್ತಿದೆ. ಅದರಲ್ಲೂ ಬಸವಾದಿ ಶರಣರು ನಡೆದಾಡಿದ ನೆಲ ಬೀದರ್‌ನಲ್ಲಿ ನಿರೀಕ್ಷೆಗೂ ಮೀರಿ ಜನ ಚಿತ್ರಮಂದಿರಗಳಿಗೆ ಬಂದು ಸಿನಿಮಾ ವೀಕ್ಷಿಸಿದ್ದಾರೆ. ರಾಜ್ಯದ ಇತರೆ ಭಾಗಗಳಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದಕ್ಕೆ ಬಹಳ ಖುಷಿ ಆಗಿದೆ.

◆ **ಅಕ್ಕನ ಪಾತ್ರದಲ್ಲಿ ನಟಿಸಿದ ನಂತರ ಏನೆನಿಸುತ್ತಿದೆ?**

ಅಕ್ಕನ ವ್ಯಕ್ತಿತ್ವ ಬಹಳ ದೊಡ್ಡದು. ಅದನ್ನು ಪದಗಳಲ್ಲಿ ವರ್ಣಿಸಲು ಆಗುವುದಿಲ್ಲ. ಅಕ್ಕಮಹಾದೇವಿ ಪಾತ್ರದಲ್ಲಿ ನಟಿಸುವುದಕ್ಕೂ ಮುನ್ನ ಅವರು ಬರೆದ ವಚನಗಳನ್ನು ಓದಿ ಅರ್ಥೈಸಿಕೊಂಡೆ. ಆನಂತರ ಅನೇಕ ವಿದ್ವಾಂಸರು, ಮಠಾಧೀಶರಿಂದ ಅಕ್ಕನ ಬಗ್ಗೆ ತಿಳಿದೆ. ಅಕ್ಕನ ಪಾತ್ರದಲ್ಲಿ ನಟಿಸುತ್ತ ಅನೇಕ ವಿಚಾರಗಳನ್ನು ತಿಳಿದೆ, ಕಲಿತೆ. ಅದಕ್ಕೆ ಒಂದು ಸಣ್ಣ ನಿದರ್ಶನವೆಂದರೆ, ಸದಾ ಹಣೆಯ ಮೇಲೆ ವಿಭೂತಿ ಹಚ್ಚಿಕೊಳ್ಳುವುದು. ಎಲ್ಲ ಸಂದರ್ಭವನ್ನೂ ಧೈರ್ಯದಿಂದ ಎದುರಿಸುವುದು ಕೂಡ ಒಂದು.

◆ **ಅಕ್ಕಮಹಾದೇವಿ ಚಿತ್ರದ ಯಶಸ್ಸಿನ ನಂತರ ಮುಂದೇನು?**

ಈ ಚಿತ್ರ ರಾಜ್ಯದಾದ್ಯಂತ ಚರ್ಚೆಯಾಯಿತು. ನನ್ನ ನಟನೆ ನೋಡಿ ಜನ ಹಾಗೂ ಚಿತ್ರರಂಗದವರು ಮೆಚ್ಚಿಕೊಂಡಿದ್ದಾರೆ. ಹೀಗಾಗಿ ಸಹಜವಾಗಿಯೇ ಹೊಸ ಚಿತ್ರಗಳಿಗೆ ಅವಕಾಶಗಳು ಕೂಡ ಬರುತ್ತಿವೆ.

◆ **ಎಂಥ ಪಾತ್ರಗಳಲ್ಲಿ ನಟಿಸಲು ಇಷ್ಟಪಡುವಿರಿ?**

ಇಂಥದ್ದೇ ಪಾತ್ರ ಅಂತೇನೂ ಇಲ್ಲ. ಯಾವುದೇ ಪಾತ್ರಗಳಿದ್ದರೂ ನಟಿಸುವೆ. ಆದರೆ, ಆ ಪಾತ್ರ ಎಂಥದ್ದು ಎಂದು ಒಂದು ಸಲ ಯೋಚಿಸಿ ನಿರ್ಧಾರ ಕೈಗೊಳ್ಳುವೆ.

◆ **ನಟನೆಯ ಆಸಕ್ತಿ ಬೆಳೆದದ್ದು ಹೇಗೆ?**

ನನಗೆ ಬಾಲ್ಯದಿಂದಲೂ ನಟನೆಯ ಬಗ್ಗೆ ಆಸಕ್ತಿ ಇತ್ತು. ಕೆಲ ರಂಗ ಪ್ರಯೋಗಗಳಿಗೂ ಬಣ್ಣ ಹಚ್ಚಿದೆ. ಕೊನೆಗೆ ಸಿನಿಮಾಗಳಲ್ಲಿ ಅವಕಾಶ ಒಲಿದುಬಂದವು. ■